(ಆ) ಮುಳವಾಡ ಏತ ನೀರಾವರಿ ಯೋಜನೆಯ ಪೂರ್ವ ಕಾಲುವೆ ಅಡಿ 3,590 ಹೆಕ್ಟೇರ್ ಕ್ಷೇತ್ರದ ಹೊಲಗಾಲುವೆ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಉಳಿದ 1,579 ಹೆಕ್ಟೇರ್ ಕ್ಷೇತ್ರದ ಕಾಮಗಾರಿ ಪ್ರಗತಿಯಲ್ಲಿದೆ. ಇದರ ಪೈಕಿ ವಿತರಣಾ ಕಾಲುವೆ ಸಂ.1ರ ಲ್ಯಾಟರಲ್ 3ರಲ್ಲಿ 290 ಹೆಕ್ಟೇರ್ ಮತ್ತು ವಿತರಣಾ ಕಾಲುವೆ ಸಂ.6ರ 1,154.47 ಹೆಕ್ಟೇರ್ ಕ್ಷೇತ್ರದಲ್ಲಿ ಕೆಲಸವನ್ನು ಏಪ್ರಿಲ್ ತಿಂಗಳಿನಲ್ಲಿ ಆರಂಭಿಸಿದ್ದು, ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಉಳಿದ 135.13 ಹೆಕ್ಟೇರ್ ಕ್ಷೇತ್ರದಲ್ಲಿ ಮುಕ್ತಾಯ ಹಂತದಲ್ಲಿದೆ.

ಪಶ್ಚಿಮ ಕಾಲುವೆಯಡಿ 13,688 ಹೆಕ್ಟೇರ್ ಕ್ಷೇತ್ರದ ಹೊಲಗಾಲುವೆ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. 4,037.83 ಹೆಕ್ಟೇರ್ ಕ್ಷೇತ್ರದ ಕಾಮಗಾರಿಯು ಪ್ರಗತಿಯಲ್ಲಿವೆ. 2,749 ಹೆಕ್ಟೇರ್ ಪ್ರದೇಶದಲ್ಲಿ ಹೊಲಗಾಲುವೆ ಕಾಮಗಾರಿ ಕೈಗೊಳ್ಳಲು ಬಾಕಿ ಉಳಿದಿರುವುದು.

(ಇ) ಬಂದಿದೆ.

(ಈ) ಪಶ್ಚಿಮ ಕಾಲುವೆ ವಿತರಣಾ ಕಾಲುವೆ ಸಂ.7, 19, 37 ಮತ್ತು 41ರಲ್ಲಿಯ ಹೊಲಗಾಲುವೆ ಕಾಮಗಾರಿಗಳು ಹೆಚ್ಚಾಗಿ ಕಬ್ಬು ಇರುವ ಜಮೀನುಗಳಲ್ಲಿ ಬಂದಿರುತ್ತದೆ, ಇದೂ ಅಲ್ಲದೆ, ರೈತರು ಕಾಲುವೆ ದಾಟಲು ಹೆಚ್ಚಿನ ಬಂಡಿ ದಾರಿಗಳನ್ನು ನಿರ್ಮಿಸಲು ಒತ್ತಾಯಿಸುತ್ತಿದ್ದು, ಇವುಗಳ ತಾಂತ್ರಿಕ ಪರಿಶೀಲನೆಗಾಗಿ ಕಾಲಾವಕಾಶ ತೆಗೆದುಕೊಳ್ಳಬೇಕಾಗಿದ್ದರಿಂದ ಕಾಮಗಾರಿಗಳು ಮಧ್ಯದಲ್ಲಿ ಸ್ಥಗಿತಗೊಂಡಿದ್ದವು.

ಇದೂ ಅಲ್ಲದೆ, ವಿತರಣಾ ಕಾಲುವೆಗಳ, ಲ್ಯಾಟರಲ್‌ಗಳ ಮತ್ತು ತೂಬುಗಳ ಕೆಲಸಗಳ ನಿರ್ಮಾಣಕ್ಕೆ ಅನುಗುಣವಾಗಿ ಸಮಾನಾಂತರವಾಗಿಯೇ ಹೊಲಗಾಲುವೆಯ ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ.

ವಿಳಂಬಕ್ಕೆ ಕಾರಣವಾದ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸಿಕೊಂಡು, ಬಾಕಿ ಉಳಿದ ಹೊಲಗಾಲುವೆ ಕಾಮಗಾರಿಗಳನ್ನು ಪ್ರಸ್ತುತ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

1083 (1467) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) :- ಮಾನ್ಯ ಜಲ ಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಮುಳವಾಡ ಏತ ನೀರಾವರಿ ಯೋಜನೆಯ ಪಶ್ಚಿಮ ಕಾಲುವೆಯಡಿ ಬರತಕ್ಕಂತಹ ಡಿಸ್ಟ್ರಿಬ್ಯೂಟರ್ ಸಂ.7ರ ಒಟ್ಟು ವಿಸ್ತೀರ್ಣ ಎಷ್ಟು;

(ಆ) ಇದನ್ನು ನಿರ್ಮಿಸುವುದಕ್ಕಾಗಿ ಯಾವ ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದೆ;

(ಇ) ಇದರ ನಿರ್ಮಾಣದ ಕೆಲಸವು ಅಪೂರ್ಣಗೊಂಡಿರುವುದು ನಿಜವೇ;

(ಈ) ಹಾಗಿದ್ದಲ್ಲಿ, ಯಾವ ಕಾರಣಕ್ಕಾಗಿ ಅಪೂರ್ಣಗೊಂಡಿದೆ;

(ಉ) ಅಪೂರ್ಣಗೊಂಡ ನಿರ್ಮಾಣ ಕೆಲಸವನ್ನು ಪೂರ್ಣಗೊಳಿಸಲು ಸರ್ಕಾರ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಕೆ.ಎಸ್. ಈಶ್ವರಪ್ಪ (ಮಾನ್ಯ ಜಲ ಸಂಪನ್ಮೂಲ ಸಚಿವರು)

(ಅ) ಮುಳವಾಡ ಏತ ನೀರಾವರಿ ಯೋಜನೆಯ ಪಶ್ಚಿಮ ಕಾಲುವೆಯಡಿ ಕಿ.ಮೀ 16.35ರಲ್ಲಿ ವಿತರಣಾ ಕಾಲುವೆ ಸಂ.7 ಇದ್ದು, ಇದರ ಉದ್ದವು 7.65 ಕಿ.ಮೀ ಆಗಿದ್ದು, ಇದರಡಿ ನೀರಾವರಿಗೆ ಒಳಪಡುವ ಕ್ಷೇತ್ರ 1,258 ಹೆ, ಆಗಿರುತ್ತದೆ.

(ಆ) ಈ ವಿತರಣಾ ಕಾಲುವೆಯ ನಿರ್ಮಾಣವನ್ನು ಪ್ಯಾಕೇಜ್ ಮಾದರಿಯ ಗುತ್ತಿಗೆ ಆಧಾರದ ಮೇಲೆ ಶ್ರೀ ಬಿ.ಎಸ್. ಪಾಟೀಲ್, ಬಿಜಾಪೂರ ಇವರಿಗೆ ರೂ. 99.61 ಲಕ್ಷಗಳಿಗೆ (11.34% ಕಡಿಮೆ) ದಿನಾಂಕ 23.12.2004ರಂದು ವಹಿಸಿ ಕೊಡಲಾಗಿದೆ.

(ಇ), (ಈ) ನಿಜ. ಈ ವಿತರಣಾ ಕಾಲುವೆಯ ಕಾಮಗಾರಿಯು ಪ್ರಗತಿಯಲ್ಲಿದ್ದಾಗ ರೈತರು ಹೆಚ್ಚಿನ ಸೌಲಭ್ಯಗಳನ್ನು ಕೇಳಿದ್ದು, ಇದಕ್ಕಾಗಿ ಹೆಚ್ಚಿನ ಸಿ.ಡಿ. ನಿರ್ಮಿಸಬೇಕಾಗಿದ್ದು, ಇದಲ್ಲದೆ ಕೆಲವೊಂದು ಭಾಗದಲ್ಲಿ ಪಥ ಬದಲಾವಣೆಗಾಗಿ, ಬೇಡಿಕೆಗಳನ್ನು ಇಟ್ಟು ಕಾಮಗಾರಿಗೆ ಅಡ್ಡಿ ಉಂಟು ಮಾಡುತ್ತಿರುವುದರಿಂದ ವಿಳಂಬವಾಗಿರುತ್ತದೆ. ಅಲ್ಲದೆ, ಕಪ್ಪು ಮಣ್ಣು ಇರುವ ಭಾಗಗಳಲ್ಲಿ ಲೈನಿಂಗ್‌ಗಾಗಿ ಅವಶ್ಯಕ ಸಿ.ಎನ್.ಎಸ್. ಮುರಮ್ ಮಾಡಬೇಕಾಗಿದ್ದು ಇದಲ್ಲದೆ ಕೆಲವೊಂದು ಸಿ.ಡಿ.ಗಳ ವಿನ್ಯಾಸ ಬದಲಾವಣೆಯಿಂದಲೂ ಕಾಮಗಾರಿ ವಿಳಂಬವಾಗಿದೆ.

(ಉ) ವಿಳಂಬಕ್ಕೆ ಕಾರಣವಾದ ಅಂಶಗಳನ್ನು ತಾಂತ್ರಿಕವಾಗಿ ಪರಿಶೀಲಿಸಿಕೊಂಡು ಸೂಕ್ತ ಕ್ರಮ ಕೈಗೊಂಡು ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

***1084 (1468)* ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) :– ಮಾನ್ಯ ಜಲ ಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:–**

(ಅ) ಮುಳವಾಡ ಏತ ನೀರಾವರಿ ಯೋಜನೆಯಲ್ಲಿ ಬಾಕಿ ಉಳಿದಿರುವ ಕಾಮಗಾರಿಗಳು ಯಾವುವು;

(ಆ) ಈ ಬಾಕಿ ಉಳಿದಿರುವ ಕಾಮಗಾರಿಗಳನ್ನು ಯಾವ ಯಾವ ಕಾಲಮಿತಿಯೊಳಗಾಗಿ ಪೂರ್ಣಗೊಳಿಸಬೇಕಾಗಿತ್ತು;